**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 32/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.05**

**ದಿನಾಂಕಃ 23.10.2025** **ಸಿಡಬ್ಲ್ಯೂ.06**

| | |
|---|---|
| ಹೆಸರು | ಸಾಕಮ್ಮ |
| ಗಂಡನ ಹೆಸರು | ಬೀರಪ್ಪ |
| ವಯಸ್ಸು | 37 ವರ್ಷ |
| ಉದ್ಯೋಗ | ಅಡಿಗೆ ಸಹಾಯಕರು |
| ವಾಸ ಸ್ಥಳ | ಕೊಂಡಜ್ಜಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1, 4 ಮತ್ತು 5 ರವರ ಪರಿಚಯ ಇದೆ. ನಾನು ಕೊಂಡಜ್ಜಿ ಶಾಲೆಯಲ್ಲಿ ಅಡಿಗೆ ಸಹಾಯಕಳಾಗಿ ಕೆಸಲ ಮಾಡುತ್ತಿದ್ದೇನೆ. ಈಗ್ಗೆ ಸುಮಾರು 5 ವರ್ಷಗಳ ಹಿಂದೆ ಒಂದು ದಿನ ಬೆಳಗ್ಗೆ ಸುಮಾರು 9 ಗಂಟೆಗೆ ರತ್ನಮ್ಮ ಚಾಸಾ.4 ಕಿಟಕಿ ಒಡೆದು ಎಣ್ಣೆ ಕಳ್ಳತನ ಮಾಡಿದ್ದಾರೆ ಎಂದು ನನಗೆ ತಿಳಿಸಿದರು, ನಂತರ ನಾವು ಮತ್ತು ರತ್ನಮ್ಮ ಈ ವಿಚಾರವನ್ನು ಶಾಲಾ ಮುಖ್ಯೋಪಾದ್ಯಾಯಾರಿಗೆ ಹೇಳಿದೆವು. ಈ ವಿಚಾರವಾಗಿ ಶಾಲಾ ಮುಖ್ಯೋಪಾದ್ಯಾಯಾರು ದೂರು ನೀಡಿದರು. ನಂತರ ಅದೇ ದಿನ ಮಧ್ಯಾಹ್ನ ಸುಮಾರು 1 ವರೆ ಗಂಟೆಗೆ ಪೋಲೀಸರು ಬಂದು ವಿಚಾರಣೆ ಮಾಡಿದರು. ಈ ಎಲ್ಲಾ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ. ಸದರಿ ಕಳ್ಳತನವನ್ನು ಯಾರು ಮಾಡಿರುತ್ತಾರೆ ಎಂದು ನನಗೆ ತಿಳಿದಿಲ್ಲ. ಕಳ್ಳರು ಸಿಕ್ಕ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾಗರಾಜ, ರಾಯಪ್ಪ ಯಾರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ11.06.2021 ರಂದು ಪೋಲೀಸರು ನನ್ನನ್ನು ಠಾಣೆಗೆ ಬರಮಾಡಿಕೊಂಡು ಪೋಲೀಸರು ಕಳ್ಳರನ್ನು ಪತ್ತೆ ಹಚ್ಚಿರುವುದಾಗಿ ಮತ್ತು ಸದರಿಯವರು ಎಣ್ಣೆ ಪಾಕೆಟನ್ನು ಕದ್ದು ಮಾರಿಕೊಂಡು ತಮ್ಮ ನಡುವೆ ಹಂಚಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕಳ್ಳರ ಹೆಸರು ನಾಗರಾಜ ಮತ್ತು ರಾಯಪ್ಪ ಎಂದಿದ್ದು ಸದರಿಯವರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ಪ್ರಕರಣವನ್ನು ಗ್ರಾಮಾಂತರ ಠಾಣೆಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ

ವಿಚಾರವನ್ನು ನನ್ನ ಮರುಹೇಳಿಕೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರುಹೇಳಿಕೆಯನ್ನು ನಿಪಿ.8 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎನ್ ಬಿ ವಕೀಲರಿಂದಃ**

ನಾನು ಅಡಿಗೆ ಮನೆಗೆ ತರಕಾರಿ ಹೆಚ್ಚಲು ಹೋದಾಗ ನನಗೆ ಖುದ್ದಾಗಿ ವಿಷಯ ತಿಳಿದಿರುತ್ತದೆ. ಕೋವಿಡ್ ಸಂದರ್ಭದಲ್ಲಿ ಅಡಿಗೆ ಮಾಡುತ್ತಿರಲಿಲ್ಲ, ಧವಸ ಧಾನ್ಯಗಳನ್ನು ವಿತರಣೆ ಮಾಡುತ್ತಿದ್ದೆವು ಎಂದರೆ ಸರಿ. ಯಾವ ಯಾವ ವಿದ್ಯಾರ್ಥಿಗಳಿಗೆ ಎಷ್ಟು ಧವಸ ಧಾನ್ಯಗಳನ್ನು ವಿತರಣೆ ಮಾಡುತ್ತೇವೆ ಎಂದು ಪಟ್ಟಿ ಇರುತ್ತದೆ ಎಂದರೆ ಸರಿ. ಅದೇ ರೀತಿ ಸರ್ಕಾರ ಎಷ್ಟು ಧವಸ ಧಾನ್ಯಗಳನ್ನು ನೀಡಿರುತ್ತದೆ ಎಂದು ದಾಖಲೆ ಇರುತ್ತದೆ ಎಂದರೆ ಸರಿ. ಕೊಠಡಿಯಲ್ಲಿಟ್ಟಿದ್ದ ಎಣ್ಣೆ ಪಾಕೆಟ್ ಗಳು ಎಷ್ಟು ಮತ್ತು ಯಾವ ಪ್ರಮಾಣದ ಎಣ್ಣೆ ಪಾಕೆಟ್ ಗಳು ಇದ್ದವು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಘಟನೆಯ ನಿಖರವಾದ ದಿನಾಂಕ, ನನಗೆ ನೆನಪಿಲ್ಲ ಎಂದರೆ ಸರಿ. ಅದೇ ರೀತಿ ಪೋಲೀಸರು ಯಾವ ದಿನಾಂಕದಂದು ಬಂದಿದ್ದರು ಎಂದು ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ಕಳುವಾದ ದಿನವೇ ಬಂದಿದ್ದರು ಎಂದು ನುಡಿಯುತ್ತಾರೆ. ನಾನು ಚಾಸಾ.1 ರವರಿಗೆ ವಿಷಯ ತಿಳಿಸಿದ ನಂತರ ಅದೇ ದಿನ ಅವರು ಪೋಲೀಸರಿಗೆ ಕರೆ ಮಾಡಿ ಪೋಲೀಸರನ್ನು ಸ್ಥಳಕ್ಕೆ ಕರೆಸಿರುತ್ತಾರೆ. ಕಿಟಕಿಯ ಚೂರುಗಳು ಎಷ್ಟು ಇದ್ದವು ಎಂದು ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು ಸ್ಥಳದಲ್ಲಿ ಕಿಟಕಿಯ ಎರಡು ಬಾಗಿಲುಗಳ ಗಾಜು ಒಡೆದಿದ್ದವು ಎಂದು ನುಡಿಯುತ್ತಾರೆ. ಚಾಸಾ.1 ರವರು ಪೋಲೀಸರಿಗೆ ಕರೆ ಮಾಡಿಲ್ಲ, ಪೋಲೀಸರು ಸ್ಥಳಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಚಾಸಾ.1 ರವರು ಹೇಳಿದ್ದನ್ನು ಪೋಲೀಸರು ಬರದುಕೊಂಡಿರುತ್ತಾರೆ ಎಂದರೆ ಸರಿ. ನಾನು ಚಾಸಾ.1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್ ಕೆ ವೈ ವಕೀಲರಿಂದಃ ಪಾಟೀಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ